ಸಂಖ್ಯೆ: ಇಡಿ/ಕೆಇಎ/ಯುಜಿಸಿಇಟಿ/2025 ದಿನಾಂಕ: 10–09–2025

## ಯುಜಿಸಿಇಟಿ–2025 ಕ್ಕೆ ಅನ್ವಯಿಸುವಂತೆ 3ನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶ – ಪ್ರಕಟಣೆ

ಕೆಲವು ವೈದ್ಯಕೀಯ ಕಾಲೇಜುಗಳಲ್ಲಿ ಸೀಟುಗಳು ಸೇರ್ಪಡೆಯಾದ ಹಿನ್ನಲೆಯಲ್ಲಿ ಹಾಗೂ ಹೊಸದಾಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜು ಸೇರ್ಪಡೆಯಾದ ಕಾರಣದಿಂದ ವೈದ್ಯಕೀಯ, ದಂತವೈದ್ಯಕೀಯ ಕೋರ್ಸುಗಳಿಗೂ ಸಹ ಇಚ್ಛೆಗಳನ್ನು ನಮೂದಿಸಲು ಅವಕಾಶ ನೀಡಿ ಇಂಜಿನಿಯರಿಂಗ್ ಹಾಗು ಇತರೆ ಕೋರ್ಸುಗಳ ಜೊತೆಯಲ್ಲಿ 3ನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ದಿನಾಂಕ 10–09–2025 ರಂದು ಪ್ರಕಟಿಸಲಾಗಿದೆ.

1. 3ನೇ ಸುತ್ತಿನ ತಾತ್ಕಾಲಿಕ ಸೀಟು ಹಂಚಿಕೆಗೆ 09–09–2025 ರ ಬೆಳಿಗ್ಗೆ 8.00 ರವರೆಗೆ ನಮೂದಿಸಿದ Options ಗಳನ್ನು ಪರಿಗಣಿಸಲಾಗಿದೆ.
2. ಇದು UGCET- 2025 ರ 3ನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವಾಗಿದ್ದು, ಅಭ್ಯರ್ಥಿಗಳು ತಾತ್ಕಾಲಿಕವಾಗಿ ಹಂಚಿಕೆಯಾಗಿರುವ ಸೀಟಿಗೆ ಕಾಲೇಜಿನಲ್ಲಿ ಪ್ರವೇಶ ಪಡೆಯುವಂತಿಲ್ಲ.
3. ಯಾವುದಾದರೂ ನಿರ್ದಿಷ್ಟ ಆಕ್ಷೇಪಣೆಗಳಿದ್ದಲ್ಲಿ (Options ಗಳನ್ನು ದಾಖಲಿಸಲಾಗಿದೆ, 3ನೇ ಸುತ್ತಿನ ಕಟ್‌ಅಫ್ ರ್‍ಯಾಂಕ್ ಪರಿಶೀಲಿಸಲಾಗಿದೆ, ಆದರೆ ಯಾವುದೂ ಸೀಟು ಹಂಚಿಕೆಯಾಗಿಲ್ಲ) **ದಿನಾಂಕ 11–09–2025 ರ ಬೆ.11.00** ರೊಳಗೆ keauthority-ka@nic.in ಗೆ ಎಲ್ಲಾ ವಿವರಗಳೊಂದಿಗೆ ಮೇಲ್ ಮಾಡಬಹುದು.

ಗಮನಿಸಿ:

ದಿನಾಂಕ 09–09–2025 ರ ಸೂಚನೆಯಲ್ಲಿ ಎಂಸಿಸಿ, ಡಿಜಿಹೆಚ್‌ಎಸ್, ನವದೆಹಲಿ ಇವರು ಎರಡನೇ ಸುತ್ತಿಗೆ ವೈದ್ಯಕೀಯ ಸೀಟುಗಳ ಪ್ರವೇಶಕ್ಕೆ ಇನ್ನೂ ಹೆಚ್ಚಿನ ವೈದ್ಯಕೀಯ ಸೀಟುಗಳು ಎನ್‌ಎಮ್‌ಸಿ ರವರಿಂದ ಸೇರ್ಪಡೆಗೊಳ್ಳುವ ಕಾರಣದಿಂದ ಎಮ್‌ಸಿಸಿ ಎರಡನೇ ಸುತ್ತಿನ ಕೌನ್ಸಿಲಿಂಗ್ ಅನ್ನು ಮುಂದೂಂಡಲಾಗುವುದು ಎಂದು ಪ್ರಕಟಿಸಿರುವುದರಿಂದ, ಹಾಗೂ

ಇಂಜಿನಿಯರಿಂಗ್ / ಆರ್ಕಿಟೆಕ್ಚರ್ ಕೋರ್ಸುಗಳ ಪ್ರವೇಶಕ್ಕೆ ಎಐಸಿಟಿಇ, ನವದೆಹಲಿ ರವರು 15ನೇ ಸೆಪ್ಟೆಂಬರ್ ದಿನಾಂಕವನ್ನು ವಿಸ್ತರಿಸುವ ಕುರಿತು ಸೂಚನೆ ನೀಡದಿರುವ ಕಾರಣದಿಂದ, 3ನೇ ಸುತ್ತಿನ ಅಂತಿಮ ಫಲಿತಾಂಶ ಪ್ರಕಟಿಸಿದ ನಂತರ; ಅಭ್ಯರ್ಥಿಗಳು

1. **ಇಂಜಿನಿಯರಿಂಗ್, ಆರ್ಕಿಟೆಕ್ಚರ್, ಯೋಗ ಮತ್ತು ನ್ಯಾಚುರೋಪತಿ, ಕೃಷಿ ವಿಜ್ಞಾನ, ವೆಟರಿನರಿ, *ಬಿ.ಎಸ್.ಸಿ (ನರ್ಸಿಂಗ್), ಬಿ–ಫಾರ್ಮ, ಫಾರ್ಮ್–ಡಿ, ಬಿಪಿಟಿ, ಬಿಪಿಒ, ಅಲೈಡ್ ಹೆಲ್ತ್ ಸೈನ್ಸ್*** ಮುಂತಾದ ಕೋರ್ಸುಗಳಲ್ಲಿ ಹಂಚಿಕೆಯಾಗುವ ಅಭ್ಯರ್ಥಿಗಳು **ದಿನಾಂಕ 13–09–2025 ರೊಳಗೆ** ನಿಗದಿತ ಶುಲ್ಕ ಪಾವತಿಸಿ, Seat Confirmation Slip ಡೌನ್‌ಲೋಡ್ ಮಾಡಿ ಹಂಚಿಕೆಯಾದ ಕಾಲೇಜಿನಲ್ಲಿ ಪ್ರವೇಶ ಪಡೆಯಲು ಸೂಚಿಸಿದೆ. (ಹಿಂದಿನ ಸುತ್ತಿನಲ್ಲಿ ಶುಲ್ಕವನ್ನು ಪಾವತಿಸಿದ್ದರೆ / Caution Deposit ಅನ್ನು ಈ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಹೊಂದಾಣಿಕೆ ಮಾಡಲಾಗುವುದು)
2. ಯುಜಿನೀಟ್ ವೈದ್ಯಕೀಯ – ದಂತವೈದ್ಯಕೀಯ ಮತ್ತು ಆಯುಷ್ ಕೋರ್ಸುಗಳಿಗೆ ಮಾತ್ರ ಅಭ್ಯರ್ಥಿಗಳು ಮುಂದಿನ ಸೂಚನೆಯವರೆಗೆ ಯಾವುದೇ ಕ್ರಮವಹಿಸದಂತೆ ಸೂಚಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು



Visit CollegeDekho